# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 718
ಮಾನ್ಯ ಸದಸ್ಯರ ಹೆಸರು : ಶ್ರೀ. ಪ್ರಕಾಶ್ ಬಾಬಣ್ಣ ಹುಕ್ಕೇರಿ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 12-07-2023
ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ಜಿಲ್ಲೆ, ಚಿಕ್ಕೋಡಿ-ಸದಲಗಾ ಕ್ಷೇತ್ರ ವ್ಯಾಪ್ತಿಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಯಾವ್ಯಾವ ಸೇತುವೆಗಳ ನಿರ್ಮಾಣ ಕಾಮಗಾರಿಗೆ ಯಾವಾಗ ಅನುಮೋದನೆ ನೀಡಲಾಗಿದೆ. ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತವೆಷ್ಟು; ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿರುವ / ವೆಚ್ಚ ಮಾಡಿರುವ ಅನುದಾನವೆಷ್ಟು; | ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ-ಸದಲಗಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎರಡು ಸೇತುವೆ ನಿರ್ಮಾಣ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಸದರಿ ಸೇತುವೆಗಳ ವಿವರಗಳು ಈ ಕೆಳಗಿನಂತಿವೆ.<br>1. ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿ ಚಂದೂರ್‌ಟೆಕ್-ಸೈನಿಕ್‌ಟೆಕ್ ಗ್ರಾಮಗಳ ಮಧ್ಯೆ ಸೇತುವೆ ನಿರ್ಮಾಣ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ:ಲೋಇ/47/ಇಎಪಿ/2013/ ಬೆಂಗಳೂರು, ದಿನಾಂಕ: 23-07-2013 ರಂದು ರೂ. 18.96 ಕೋಟಿಗಳ ಅಂದಾಜು ಮೊತ್ತಕ್ಕೆ ಅನುಮೋದನೆ ನೀಡಲಾಗಿರುತ್ತದೆ. ಸದರಿ ಕಾಮಗಾರಿಗೆ ಇಲ್ಲಿಯವರೆಗೂ ರೂ. 18.54 ಕೋಟಿಗಳ ಮೊತ್ತವನ್ನು ವೆಚ್ಚ ಮಾಡಲಾಗಿರುತ್ತದೆ.<br>2. ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಯಡೂರು-ಕಲ್ಲೋಳ ಗ್ರಾಮಗಳ ಮಧ್ಯೆ ರಸ್ತೆ ಸರಪಳಿ 44.70 ರಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ:ಲೋಇ /34/ಇಎಪಿ/2014/ ಬೆಂಗಳೂರು, ದಿನಾಂಕ: 31-01-2017 ರಂದು ರೂ.23.00 ಕೋಟಿಗಳ ಅಂದಾಜು ಮೊತ್ತಕ್ಕೆ ಅನುಮೋದನೆ ನೀಡಲಾಗಿರುತ್ತದೆ. ಸದರಿ ಕಾಮಗಾರಿಗೆ ಇಲ್ಲಿಯವರೆಗೂ ರೂ. 16.25 ಕೋಟಿಗಳ ಮೊತ್ತವನ್ನು ವೆಚ್ಚ ಮಾಡಲಾಗಿರುತ್ತದೆ. |
| ಆ) | ಈ ಸೇತುವೆ ಕಾಮಗಾರಿಗಳು ಪೂರ್ಣಗೊಂಡಿವೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು; ಕಾಮಗಾರಿಗಳ ಪ್ರಗತಿ ಕುಂಠಿತಗೊಂಡಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಸದರಿ ಸೇತುವೆ ಕಾಮಗಾರಿಗಳು ಇದುವರೆಗೂ ಕೆಳಕಂಡ ಕಾರಣಗಳಿಂದಾಗಿ ಪೂರ್ಣಗೊಂಡಿರುವುದಿಲ್ಲ.<br>1. ಸೇತುವೆ ಹಾಗೂ ಕೂಡು ರಸ್ತೆ ನಿರ್ಮಾಣ ಖಾಸಗಿ ಜಮೀನುಗಳಲ್ಲಿ ಬರುತ್ತಿರುವುದರಿಂದ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡು ಗುತ್ತಿಗೆದಾರರಿಗೆ ಹಸ್ತಾಂತರಿಸಲು ವಿಳಂಬವಾಗಿರುತ್ತದೆ.<br>2. 2019ರ ಅತಿವೃಷ್ಟಿಯ ಸಮಯದಲ್ಲಿ ನದಿ ಪಾತ್ರದಲ್ಲಿ ಉಂಟಾದ ಮಹಾಪೂರದ ಕಾರಣ ವಿಳಂಬವಾಗಿರುತ್ತದೆ.<br>3. 2020 ಹಾಗೂ 2021 ರಲ್ಲಿ ಕೋವಿಡ್19 ರ ಮಹಾಮಾರಿಯಿಂದ ಕಾಮಗಾರಿಯಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗಿರುವುದಿಲ್ಲ.<br>4. ಸದರಿ ಕಾಮಗಾರಿಯನ್ನು ಟರ್ನ್-ಕೀ ಆಧಾರದಲ್ಲಿ ಕೈಗೊಂಡಿರುವುದರಿಂದ ಆರ್ಥಿಕ ನಷ್ಟವಾಗದೇ ಇರುವ ಹಾಗೇ ವಿನ್ಯಾಸಗಳನ್ನು ಪರಿಷ್ಕರಿಸುವ ಕಾರಣದಿಂದಾಗಿ ವಿಳಂಬವಾಗಿರುತ್ತದೆ. |

| | | |
|---|---|---|
| | | 5. 2019, 2020 ಮತ್ತು 2021ರ ಸಾಲಿನ ಬಾರಿ ಮಳೆಯ ನೀರಿನ ಮಟ್ಟ ಪರಿಗಣಿಸಿದ ಪ್ರಯುಕ್ತ ಸೇತುವೆಯ ವಿನ್ಯಾಸದಲ್ಲಿ ಹಲವಾರು ಬದಲಾವಣೆಗಳಿಂದಾಗಿ ಕಾಮಗಾರಿ ಪರಿಮಾಣಗಳಲ್ಲಿ ವ್ಯತ್ಯಾಸ ಉಂಟಾಗಿ ವಿಳಂಬವಾಗಿರುತ್ತದೆ.<br><br>ಚಂದೂರಟೆಕ್-ಸೈನಿಕಟೆಕ್ ಸೇತುವೆಯನ್ನು ಸೆಪ್ಟಂಬರ್-2023ರ ಅಂತ್ಯಕ್ಕೆ ಹಾಗೂ ಯಡೂರ-ಕಲ್ಲೋಳ ಸೇತುವೆಯನ್ನು ಮಾರ್ಚ್-2024 ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ. |
| ಇ) | ಚಿಕ್ಕೋಡಿ ತಾಲ್ಲೂಕಿನ ಚಂದೂರ್‌ಟೆಕ್-ಸೈನಿಕ್ ಟಾಕಳಿ ಸೇತುವೆ ನಿರ್ಮಾಣ ಕಾಮಗಾರಿಗೆ ಮಂಜೂರಾತಿ ಯಾವಾಗ ನೀಡಲಾಯಿತು; ಸದರಿ ಸೇತುವೆಯು ಇನ್ನೂ ಪೂರ್ಣಗೊಳ್ಳದೆ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರ ಕೈಗೊಂಡ ಕ್ರಮಗಳೇನು; (ಭೌತಿಕ ಹಾಗೂ ಆರ್ಥಿಕ ಪ್ರಗತಿಯ ಸಂಪೂರ್ಣ ವಿವರ ನೀಡುವುದು) | ಚಿಕ್ಕೋಡಿ ತಾಲ್ಲೂಕಿನ ಚಂದೂರ್‌ಟೆಕ್-ಸೈನಿಕ್‌ಟೆಕ್ ಸೇತುವೆ ನಿರ್ಮಾಣ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ:ಲೋಇ/47/ಇಎಪಿ/2013/ಬೆಂಗಳೂರು, ದಿನಾಂಕ: 23-07-2013 ರಂದು ಅನುಮೋದನೆ ನೀಡಲಾಗಿರುತ್ತದೆ. ಸದರಿ ಸೇತುವೆಯ ಕಾಮಗಾರಿಯು ಪೂರ್ಣಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸೆಪ್ಟೆಂಬರ್ 2023ರ ಅಂತ್ಯಕ್ಕೆ ಕಾಮಗಾರಿಯನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ.<br><br>ಇಲ್ಲಿಯವರೆಗೆ ಒಟ್ಟು 9 ಪಿಯರ್ ಮತ್ತು 2 ಅಬುಟ್‌ಮೆಂಟ್‌ಗಳ ಫೌಂಡೇಶನ್‌ಗಳ ಹಾಗೂ ಸಬ್‌ಸ್ಟ್ರಕ್ಚರ್ ಕಾಮಗಾರಿ ಪೂರ್ಣಗೊಂಡಿದೆ. ಎಲ್ಲಾ 40 ಗರ್ಡರ್‌ಗಳ ಕಾಸ್ಟಿಂಗ್ ಹಾಗೂ ಲಾಂಚಿಂಗ್ ಪೂರ್ಣಗೊಂಡಿದೆ.<br><br>ಒಟ್ಟು 10 ಡೆಕ್‌ಸ್ಲ್ಯಾಬ್ ಗಳಲ್ಲಿ 7 ಡೆಕ್‌ಸ್ಲ್ಯಾಬ್‌ಗಳ ಕಾಮಗಾರಿ ಪೂರ್ಣಗೊಂಡಿದ್ದು, 3 ಡೆಕ್‌ಸ್ಲ್ಯಾಬ್‌ಗಳ ಕಾಮಗಾರಿ ಪ್ರಗತಿಯಲ್ಲಿದೆ. ಚೆಂದೂರಟೆಕ್ ಕಡೆಯ ಕೂಡುರಸ್ತೆಯಲ್ಲಿನ ಬಾಕ್ಸ್ ಕಲ್ವರ್ಟ್ ಕಾಮಗಾರಿ ಪೂರ್ಣಗೊಂಡಿದ್ದು, ರಿಟೆನಿಂಗ್‌ವಾಲ್ ಹಾಗೂ ಕೂಡುರಸ್ತೆ ಕಾಮಗಾರಿ ಪ್ರಗತಿಯಲ್ಲಿದೆ. ಸೈನಿಕಟೆಕ್ ಕಡೆಯ ಕೂಡು ರಸ್ತೆಯಲ್ಲಿನ ಬಾಕ್ಸ್‌ಕಲ್ವರ್ಟ್/ಪೈಪ್‌ಕಲ್ವರ್ಟ್ ಮತ್ತು ರಿಟೆನಿಂಗ್‌ವಾಲ್ ಕಾಮಗಾರಿ ಪ್ರಗತಿಯಲ್ಲಿದೆ.<br><br>ಸದರಿ ಕಾಮಗಾರಿಯಲ್ಲಿ ರೂ. 18.54 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ. |

ಸಂಖ್ಯೆ. ಲೋಇ E-248 ಇಎಪಿ 2023

(ಸತೀಶ್ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಸತೀಶ ಜಾರಕಿಹೊಳಿ
ಲೋಕೋಪಯೋಗಿ ಸಚಿವರು